Sri H. M. CHANNABASAPPA (Minister for Public Works and Electricity).—

Taking up of second and third stage of work depends upon availability of funds and conveniences.

ಶ್ರೀ ಕೆ. ಎನ್. ವೀರಪ್ಪಗೌಡ.—ಶೃಂಗೇರಿ, ನೆಮ್ಮೂರು, ಮಿಯೂರ್ ಫಾಲ್ ಕಾರ್ಖಾನೆಕ್ಕೆ ಸೇರುವ ರಸ್ತೆಯನ್ನು 20 ವರ್ಷಗಳಿಂದ ಮಾಡಬೇಕೆಂದು ಇದ್ದಾರೆ. ಈಗಾಗಲೇ ಇದರ ಮೊದಲನೆ ಹಂತದ ಪೂರ್ಣ ಕೆಲಸ ಮುಗಿದು ಎರಡನೇ ಹಂತದ ಕೆಲಸ ಹೋದ ಸಾರಿ ತೆಗೆದುಕೊಳ್ಳಬೇಕಾಗಿತ್ತು. ಈಗಲೂ ಕೂಡ ಹಣದ ಅನುಕೂಲ ಸ್ಥಿತಿ ಇದ್ದಾಗ ಸ್ಯಾಂಕ್ಷನ್ ಆಗಿರತಕ್ಕ ಕೆಲಸವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಈ ರಾಜ್ಯದಲ್ಲಿ ಮುಂದೆ ಕೆಲಸವಾಗುತ್ತದೆ ಎನ್ನುವ ಮನೋಭಾವನೆ ಜನಗಳಲ್ಲಿ ಬರುವ ರೀತಿಯಲ್ಲಿ ಏನಾದರೂ ಸರ್ಕಾರದವರು ಈ ವಿಚಾರದಲ್ಲಿ ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಕೆಲಸಗಳನ್ನು ಮೂರು ಹಂತಗಳಲ್ಲಿ ತೆಗೆದುಕೊಳ್ಳಬೇಕು ಎಂದು ತೀರ್ಮಾನಿಸಿದ್ದೇವೆ. ಒಂದು ಹಂತ ಮುಗಿದಿದೆ. ಎರಡನೇ ಹಂತ ತೆಗೆದುಕೊಳ್ಳುತ್ತೇವೆ. ಇದಾದಮೇಲೆ ಮೂರನೇ ಹಂತ ತೆಗೆದುಕೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಂತ ಹಂತದಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹಲವು ಹಂತಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ. ಅದನ್ನು ಸರ್ಕಾರದ ಗಮನಕ್ಕೆ ತಂದರೆ ಏನು ಪ್ರಾಯಶ್ಚಿತ್ತ ಅನುಭವಿಸುತ್ತೀರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಉದ್ದೇಶಪೂರ್ವಕವಾಗಿ ಕೈಬಿಟ್ಟಿದೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ವಿಚಾರ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಎಕಾನಮಿ ಆರ್ಡರ್ ಪ್ರಕಾರ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎನ್ನುವ ಭಾವನೆ ಇದೆ. ಆ ಎಕಾನಮಿ ಆರ್ಡರ್ ಯಾವಾಗ ವಾಪಸ್ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಕಾನಮಿ ಆರ್ಡರ್ ತೆಗೆಯಬೇಕು ಮತ್ತು ಕೆಲಸ ಪ್ರಾರಂಭ ಮಾಡಬೇಕೆಂಬುದು ನಮ್ಮ ಉದ್ದೇಶ ಇದೆ. ಆದಷ್ಟುಬೇಗ ಈ ಕೆಲಸ ತೆಗೆದುಕೊಳ್ಳುತ್ತೇವೆ.

Grant of Timbers to Agriculturists of Malnad

78. Sri S. M. SHEERANALLY CHANDRASEKHAR (Hosanagar).—

Will the Minister for Agriculture and Forests be pleased to state :—

(*a*) the reasons for suspending the concession of removal of trees under M.R.P. Rules which was a boon to the agriculturists of Malnad ;

(*b*) whether it has come to the notice of the Government that there is delay in releasing the cultivable forest land to the landless agriculturists ?

Sri K. H. PATIL (Minister for Agriculture and Forests).—

(*a*) The practice of grants of Timber, etc., to the farmers of the Malnad areas under the M.R.P. Rules had to be suspended after 1st June 1969, since, the uniform Mysore Forest Rules, 1969 came into

(SRI K. H. PATIL)

force with effect from 1st June 1969 and there were no provisions for the continuation of the M.R.P. Rules of the erstwhile Malnad areas of Mysore. However, the Chief Conservator of Forests (Gl) in Mysore, Bangalore took action in anticipation of Government orders to provide for immediate relief to the farmers of the Malnad areas pending the issue of relevant Government Orders granting special privileges to the cultivating ryots of certain scheduled areas all over the State. The Government Order No. AFD 255 FAD 69, dated 19th November 1971 fixing up the special privileges to the cultivating ryots on a uniform scale all over the State has since been issued.

(*b*) No.

ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್.—ಎಂ.ಆರ್.ಪಿ. ರೈಸೆನ್ಸ್ ರದ್ದು ಮಾಡಿದರೂ ಕೂಡ ವಿಶೇಷ ಸವಲತ್ತುಗಳನ್ನು ಮಲೆನಾಡಿನ ರೈತರಿಗೆ ಕೊಟ್ಟಿದೆ ಎಂದು ಹೇಳಿದ್ದೀರಿ. ಆದರೆ ನಾಟ್ ಪಡೆಯಬೇಕಾದರೆ ನೂರಾರು ರೂಪಾಯಿ ಖರ್ಚು ಮಾಡುವ ಪರಿಸ್ಥಿತಿ ಬಂದಿದೆ. ಮಲೆನಾಡು ರೈತರಿಗೆ ಸವಲತ್ತುಗಳನ್ನು ಕೊಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರೂ ಪರಿಸ್ಥಿತಿ ಉತ್ಪಮಗೊಂಡಿಲ್ಲ. ಈಗಲೂ ಕೂಡ ಮಲೆನಾಡು ರೈತ ಫಾರೆಸ್ಟ್ ಕಂಟ್ರಾಕ್ಟರ ಜೊತೆಗೆ ಹರಾಜಿಗೆ ನಿಂತು ನೂರಾರು ರೂಪಾಯಿ ಖರ್ಚುಮಾಡಿ ನಾಟ್ ತೆಗೆದುಕೊಳ್ಳಬೇಕು. ಆದ್ದರಿಂದ ಮಲೆನಾಡು ರೈತರಿಗೆ ಯಾವ ಸವಲತ್ತು ಒದಗಿಸಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಕೆ. ಎಚ್. ಪಾಟೀರ್.—ಸರ್ಕಾರಿ ಆರ್ಡರ್‌ನಲ್ಲಿ ಏನು ನಮೂದು ಆಗಿದೆ ಅದರಂತೆ ಸೌಲಭ್ಯಗಳು ಮಲೆನಾಡಿನ ರೈತರಿಗೆ ಲಭ್ಯವಾಗಿರುವುದರಿಂದ ಯಾವುದೇ ತಕರಾರು ಸರ್ಕಾರದ ಗಮನಕ್ಕೆ ಬಂದಿಲ್ಲ. ಒಂದು ಮಾತು ನಿಜ. ಮೊದಲು ಒಂದು ಕಾರ್ಟ್ ರೋಡಿಗೆ ಎರಡೂವರೆ ರೂಪಾಯಿ ಕೊಡಬೇಕು ಎಂದು ಇತ್ತು. ರೈತನ ಹೆಸರಿನಲ್ಲಿ ಬೇರೆಯವರು ಅದರ ಉಪಯೋಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಮೇಲೆ ಅದನ್ನು ಐದು ರೂಪಾಯಿಗಳಿಗೆ ಏರಿಸಿದೆ. ಇದರಿಂದ ಕೆಲವು ತಕರಾರುಗಳು ಸರ್ಕಾರಕ್ಕೆ ಬರಲಿಕ್ಕೆ ಹತ್ತಿದೆ.

ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್.—ನನ್ನ 'ಅ' ಪ್ರಶ್ನೆಗೆ ಉತ್ತರವಾಗಿ, ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೀರಿ. ಅರಣ್ಯ ಇರಾಖೆಗೆ ಭೂಮಿ ರಿಸರ್ವ್ ಆಗಿದೆ ಕೊಡುವುದಕ್ಕಾಗುವುದಿಲ್ಲ ಎಂದು ಕೊಟ್ಟಿದ್ದಾರೆ. ರಿಜೆಕ್ಟ್ ಆಗಿರುವ ಸಾವಿರಾರು ಅರ್ಜಿಗಳನ್ನು ತಮ್ಮ ಗಮನಕ್ಕೆ ನಾನೇ ತಂದಿದ್ದೇನೆ. ಆದರೂ ತಮ್ಮ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದೀರಿ, ಇದಕ್ಕೆ ಕಾರಣ ತಿಳಿಸಬೇಕು?

ಶ್ರೀ ಕೆ. ಎಚ್. ಪಾಟೀರ್.—ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಓದಿದರೆ ಉತ್ತರ ಸಮಂಜಸ ಎಂದು ಅನಿಸುತ್ತದೆ. "ಸಾಗುವಳಿಗೆ ಯೋಗ್ಯವಾದ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವಲ್ಲಿ ವಿಳಂಬವಾಗಿ ಭೂಹೀನ ರೈತರಿಗೆ ಜಮೀನು ಸಾಗುವಳಿಗೆ ನೀಡುವುದು ವಿಳಂಬವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ? ಎಂದು ಕೇಳಿದ್ದೀರಿ. ಅದನ್ನು ಗವರ್ನ್‌ಮೆಂಟ್ ಪಾಲಸಿ ಪ್ರಕಾರ ಲ್ಯಾಂಡ್ ಕೊಡುವುದಕ್ಕಾಗುವುದಿಲ್ಲ ಎಂದು ರಿಜೆಕ್ಟ್ ಮಾಡಿದ್ದೇವೆ. ಅದರಿಂದ ವಿಳಂಬವಾಗುವ ಪ್ರಶ್ನೆ ಇಲ್ಲ. ತಕ್ಷಣ ಆರ್ಡರ್ ಆಗಿದೆ.

ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್.—ಮಲೆನಾಡಿನಲ್ಲಿ 100 ಕ್ಕೆ 90 ಭಾಗ ಜಮೀನು ಅರಣ್ಯ ಪ್ರದೇಶವಿದೆ. ಅಂಥದ್ದರಲ್ಲಿ ಅಷ್ಟಿಷ್ಟು ಜಮೀನನ್ನು ರಿಲೀಸ್ ಮಾಡಿಕೊಡುವ ಪದ್ಧತಿ ಇತ್ತು. ನೂರಾರು ಅರ್ಜಿಗಳು ಸರ್ಕಾರದ ನೀತಿಯಿಂದಾಗಿ ಪೆಂಡಿಂಗ್ ಇವೆ. ರಿಪೀಟೆಡ್ ರಿಕ್ವೆಸ್ಟ್ ಮಾಡಿದರೂ ಕೂಡ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತಾ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇಂಥ ವಿಷಯದಲ್ಲಿ ಸರ್ಕಾರಕ್ಕೆ ಸಹಾನುಭೂತಿ ಇದ್ದರೂ ಸಹ ದುರಾದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಪರ್ಸೆಂಟೇಜ್ 100 ಕ್ಕೆ 18 ರಷ್ಟು ಇರುವುದರಿಂದ ಈ ವಿಷಯದಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಲೆನಾಡು ಪ್ರದೇಶದಲ್ಲಿ ರೈತರು ಅನೇಕ ಶತಮಾನಗಳಿಂದ ರಿಯಾಯಿತಿ ದರದಲ್ಲಿ ಕಾನೂನು ಪ್ರಕಾರ ಸೌದೆ ಸೊಪ್ಪು ಇತ್ಯಾದಿ ಉಪಯೋಗ ಮಾಡುತ್ತಾ ಬಂದಿದ್ದಾರೆ. ಸೌದೆ ಎರಡೂವರೆ ರೂಪಾಯಿಗೆ ಒಂದು ಕಾರ್ಟ್ ಲೋಡು ಇದ್ದುದನ್ನು ಐದು ರೂಪಾಯಿಗೆ ಹೆಚ್ಚಿಸಿರುವುದರಿಂದ ಮಲೆನಾಡಿನ ರೈತರಿಗೆ ಅನ್ಯಾಯವಾಗಿದೆ. ಆದ್ದರಿಂದ ಸರ್ಕಾರ ಇದನ್ನು ಪುನಃ ಪರಿಶೀಲನೆ ಮಾಡಿ ಮೊದಲು ಇದ್ದಹಾಗೆ ಎರಡೂವರೆ ರೂಪಾಯಿಗೆ ಇಳಿಸಬೇಕು. ದಯವಾಡಿ ಶೀಘ್ರದಲ್ಲಿ ಇದರ ಬಗ್ಗೆ ತಾವು ಒಂದು ಆಜ್ಞೆಯನ್ನು ಹೊರಡಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಮಾರ್ಕೆಟ್ಟಿನಲ್ಲಿ ಸೌದೆಯ ಬೆಲೆ ಒಂದು ಕಾರ್ಟ್ ಲೋಡಿಗೆ 15 ರೂಪಾಯಿಗೆ ಇದ್ದಾಗ, 2 ರೂಪಾಯಿ ಧಾರಣೆಯನ್ನು ನಿಗದಿ ಮಾಡಿತ್ತು. ಈಗ ಮಾರ್ಕೆಟ್ಟಿನಲ್ಲಿ ಒಂದು ಕಾರ್ಟ್ ಲೋಡಿಗೆ 32 ರೂಪಾಯಿ ಆಗಿರುವಾಗ ಇನ್ನೂ ಹೆಚ್ಚು ಮಾಡಬಹುದಿತ್ತು. ಆದರೆ ರೈತರಿಗೆ ಅನಾನುಕೂಲವಾಗಬಾರದೆಂದು ಒಂದು ಕಾರ್ಟ್‌ಲೋಡಿಗೆ ಐದು ರೂಪಾಯಿ ಮಾಡಿದೆ. ಕಾಫೀ ಪ್ರದೇಶದ ಜನಗಳಿಗೆ ಈ ಸವಲತ್ತನ್ನು ವಿಸ್ತರಿಸಿದೆ, ಅನೇಕ ಸಂದರ್ಭಗಳಲ್ಲಿ ರೈತರ ಹೆಸರಿನಲ್ಲಿ ಈ ಸವಲತ್ತನ್ನು ದುರುಪಯೋಗ ಮಾಡಿಕೊಂಡ ಕಂಟ್ರಾಕ್ಟರುಗಳ ಹೆಸರುಗಳು ನಮ್ಮ ನಜರಿಗೆ ಬಂದಿದೆ. ರಾಜ್ಯದ ಹಿತದೃಷ್ಟಿಯಿಂದ ಈ ನಿಯಮವನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜೆ. ವೆಂಕಟಪ್ಪ.—ರೈತರಿಗೆ ತೊಂದರೆಯಾಗಬಾರದು, ಒಂದು ಗಾಡಿ ಸೌದೆಗೆ 32 ರೂಪಾಯಿ ಬೆಲೆ ಇದೆ ; ಐದು ರೂಪಾಯಿ ಮಾಡಿದ್ದು ತಪ್ಪಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಯಾರೋ ಒಬ್ಬ ರೈತ ದುರುಪಯೋಗ ಮಾಡಿದ್ದಾನೆ ಅನ್ನುವುದು ಕಂಡರೆ ಅಂಥ ರೈತನನ್ನು ನಮ್ಮ ಎದುರಿಗೆ ತಂದು ತೋರಿಸಿದರೆ, ಆಗ ಐದು ರೂಪಾಯಿ ಅಲ್ಲ, ಇನ್ನೂ ಬೆಲೆಯನ್ನು ಹೆಚ್ಚು ಮಾಡಬಹುದು. ಆದರೆ ರೈತರಿಗೆ ಇರುವ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. ರೈತರು ವ್ಯಾಪಾರ ಮಾಡುತ್ತಿದ್ದಾರೆ ಎಂದು ಏನು ಹೇಳುತ್ತಿದ್ದೀರಿ ಅದು ಸುಳ್ಳು. ನಿಜವಿದ್ದರೆ ಈ ಸಭೆಗೆ ತಿಳಿಸಬಹುದು.

ಶ್ರೀ ಕೆ. ಎಚ್. ಪಾಟೀಲ್.—ಅದು ಸರ್ಕಾರದ ಅಭಿಪ್ರಾಯ. ಅನೇಕ ಕಡೆ, ಅ ರೀತಿ ಮಿಸ್ ಯೂಸ್ ಮಾಡುತ್ತಾರೆಂದು ನನ್ನ ಗಮನಕ್ಕೆ ಬಂದಿದೆ. ಮಿಸ್ ಯೂಸ್ ಎಲ್ಲೆಲ್ಲಿ ಆಗಿದೆಯೆಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸ್ವಾಮಿ, ಬಹುತೇಕ ಮಲೆನಾಡು ಪ್ರದೇಶದ ಜಾಗವನ್ನು ಮಲೆನಾಡು ರೈತರಿಗೆ ಉಳುಮೆ ಮಾಡುವುದಕ್ಕೆ ಕೊಡುವುದಿಲ್ಲ ಎಂದು ಹೇಳುವುದಾದರೆ ಅವರು ಎಲ್ಲಿಗೆ ಹೋಗಬೇಕು ? ಎರಡನೆಯದಾಗಿ, ಅರಣ್ಯ ಭೂಮಿಯನ್ನು ಕಾಫೀ ಸಾಗುವಳಿ ಮಾಡುವುದಕ್ಕೆ ಕೊಟ್ಟರೆ ಅರಣ್ಯ ಸದಾ ಕಾಲ ಹಸಿರು ಆಗಿರುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಒಪ್ಪಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಆಗಲೇ ಹೇಳಿದ್ದೇನೆ, 100 ಎಕರೆ ಭೂಮಿಗೆ ಇಷ್ಟು ಅರಣ್ಯ ಇರಬೇಕು ಎಂದು ಕಡ್ಡಾಯ ನಿಯಮವಿರುವುದರಿಂದ, ಜಗತ್ತಿನಲ್ಲಿ 100ಕ್ಕೆ 35ರಷ್ಟು ಅರಣ್ಯವಿದೆ. ಭಾರತದಲ್ಲಿ 100ಕ್ಕೆ 22ರಷ್ಟು ಇದೆ, ಆದರೆ ದುರ್ದೈವವಶಾತ್ ನಮ್ಮ ರಾಜ್ಯದಲ್ಲಿ 100ಕ್ಕೆ 18ರಷ್ಟು ಮಾತ್ರ ಇದೆ. ರಾಜ್ಯದ ಹಿತದೃಷ್ಟಿಯಿಂದ ಮತ್ತು ವಕ್ಕಲಿಗರ ಹಿತದೃಷ್ಟಿಯಿಂದ ಈ ಅರಣ್ಯ ಭೂಮಿಯನ್ನು ಕಾಪಾಡಬೇಕಾಗುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ರೈತರು ಎಲ್ಲಿಗೆ ಹೋಗಬೇಕು ಎಂದರೆ ಇಲ್ಲಿಯವರೆಗೆ ಅವರು ಎಲ್ಲಿಗೆ ಹೋಗಿದ್ದಾರೋ, ಅಲ್ಲಿಗೆ ಹೋಗಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಮಲೆನಾಡಿನ ರೈತರ ಹಕ್ಕನ್ನು ಮೊಟಕು ಮಾಡುವ ಪ್ರಶ್ನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗುವುದು ಗೊತ್ತಿದೆ. ಅದಕ್ಕೆ ತಮ್ಮನ್ನು ಕೇಳಲಲ್ಲ. ಮಲೆನಾಡಿನಲ್ಲಿರುವ ಭೂಮಿಯನ್ನು ಅಲ್ಲಯ ರೈತರಿಗೆ ಸಾಗುವಳಿ ಮಾಡುವುದಕ್ಕೆ ಕೊಡಿ ಎಂದರೆ, ಕೊಡುವುದಿಲ್ಲ. ಮೈದಾನದಲ್ಲರುವ ನಮ್ಮ ರೈತರಿಗೆ ಅಲ್ಲಯ ಭೂಮಿಯನ್ನು ಸಾಗುವಳಿ ಮಾಡಿಕೊಳ್ಳುವುದಕ್ಕೆ ಕೊಡುತ್ತೀರಿ.

ಶ್ರೀ ಕೆ. ಎಚ್. ಪಾಟೀಲ್.—ಭೂಮಿ ಇಲ್ಲದವರು ಎಲ್ಲಿ ಸಾಗುವಳಿ ಮಾಡತಕ್ಕ ಭೂಮಿ ಇದೆಯೋ ಅಲ್ಲಿಗೆ ಹೋಗುತ್ತಾರೆ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಿಗೆ ಹೋಗಿದ್ದಾರೋ ಅಲ್ಲ ಭೂಮಿಯನ್ನು ಅವರಿಗೆ ಮುಂಜೂರು ಮಾಡುವುದಕ್ಕೆ ಮನಸ್ಸು ಮಾಡಿ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಈ ಸಂದರ್ಭದಲ್ಲಿ ಅರಣ್ಯ ಎಷ್ಟು ಇರಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆ. ಮಲೆನಾಡಿನಲ್ಲಿ ಅರಣ್ಯ ಬೆಳೆದಹಾಗೆ ನಮ್ಮಲ್ಲಿ ಬೆಳೆಯುವುದಿಲ್ಲ ಎನ್ನುವುದು ಸದಸ್ಯರಿಗೆ ಗೊತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನ ಕಾಡನ್ನು ಕಡಿದು ಬಿರ್ಲಾ ಅವರಿಗೆ ಹೊಸ ರಯಾನ್ ಸಿಲ್ಕ್ ಕಾರ್ಖಾನೆಗೆ ಕೊಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್.—ಬಿರ್ಲಾ ಅಥವಾ ಇನ್ನು ಯಾವ ಕಾರ್ಖಾನೆಯಾದರೂ ಅಲ್ಲಿ ಬರಲೇಬೇಕು.

ಶ್ರೀ ಎಸ್. ಬಂಗಾರಪ್ಪ.—ಬಿರ್ಲಾ ಬರಬೇಕು ಎನ್ನುವುದು ನಿಮ್ಮ ಅರ್ಥ, ಅದು ಇಡೀ ದೇಶಕ್ಕೆ ಗೊತ್ತಾಗಿದೆ.

ಶ್ರೀ ಎ. ಎನ್. ಪಾಟೀಲ್.—ಅರಣ್ಯ ಪರ್ಸೆಂಟೇಜ್ ಎಷ್ಟು ಇರಬೇಕು ಎಂದು ಏವರಿಸಿದಿರಿ, ವಾಪ್ಯುಲೇಷನ್ ಎಷ್ಟು ಇತ್ತು, ಅಗ್ರಿಕರ್ಚರಲ್ ಕ್ಲಾಸ್, ಪೆಸೆಂಟ್ರಿ ಎಷ್ಟು ಇತ್ತು ಮತ್ತು ರ್ಯಾಂಡ್‌ರೆಸ್ ಪರ್ಸೆಂಟೇಜ್ ಎಷ್ಟು ಇತ್ತು ಅದರಂತೆ ಆಗಿನ ಕಾಲದಲ್ಲಿ ಮಾಡಿದ ರೂರ್ ಈಗ, ಅಪ್ಲೈ ಮಾಡುವುದಕ್ಕೆ ಆಗುತ್ತದೆಯೇ ಎಂದು ಯೋಚನೆ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಆ ಥಿಯರಿಯನ್ನು ಯಾವ ಕಾಲದಲ್ಲೋ ಓದಿಕೊಂಡಿದ್ದೀರಿ, ಅದನ್ನು ಹೊಸದಾಗಿ ಓದಿ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಥಿಯರಿ ಯಾವುದು ಇದೆ ಹೇಳಿ !

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಥಿಯರಿ ಮುಂದೆ ಯಾವುದೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ಅರಣ್ಯವನ್ನೆಲ್ಲಾ ಕಡಿದು ಅರಣ್ಯ ರೋಧನ ಮಾಡುತ್ತಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಈ ಅರಣ್ಯದ ಬಗ್ಗೆ ಹಿಂದಿನ ಕಾಲದಿಂದಲೂ ಒಂದು ಸ್ಟ್ಯಾಂಡರ್ಡ್ ಮೇಂಟೇನ್ ಮಾಡಿಕೊಂಡು ಬಂದಿದ್ದೇವೆ. ಇರತಕ್ಕ ಭೂಮಿಯಲ್ಲಿ 25ರಷ್ಟು ಭಾಗ ಅರಣ್ಯಕ್ಕೆಂದು ಇಟ್ಟಿರತಕ್ಕದ್ದು ಇದೆ. ಆದರೆ ನಮ್ಮ ದೇಶದಲ್ಲಿ ಇದು ಶೇಕಡ 18 ರಷ್ಟು ಮಾತ್ರ ಇದೆ. ನಾವು ಇರತಕ್ಕ ಭೂಮಿಯನ್ನು ಪ್ರಿಸರ್ವ್ ಮಾಡಿ ಅರಣ್ಯವನ್ನು ಡೆವಲಪ್ ಮಾಡತಕ್ಕದ್ದು ತುಂಬಾ ಅಗತ್ಯವಿದೆ.

2-00 P.M.

ಹಿಂದೆ ಒಂದಾನೊಂದು ಕಾಲದಲ್ಲಿ ಅರಣ್ಯದಿಂದ ಸೌದೆ ತಂದು ಉಪಯೋಗ ಮಾಡುತ್ತಿದ್ದರು, ಅದರಿಂದ ಇದ್ದಿಲು ಸುಡುತ್ತಿದ್ದರು, ಕಟ್ಟಿಗೆ ತೆಗೆದುಕೊಂಡು ಬಂದು ಮನೆಗಳನ್ನು ಕಟ್ಟುತ್ತಿದ್ದರು, ಬೊಂಬುಗಳನ್ನು ತೆಗೆದುಕೊಂಡು ಬಂದು ಕುಕ್ಕೆ ಮಾಡುತ್ತಿದ್ದರು. ಆದರೆ ಈಗ ಅರಣ್ಯ ಸಂಪತ್ತು ಆಧುನಿಕ ಪ್ರಪಂಚದಲ್ಲ ಮಾನವನ ಬದುಕುವಿಕೆಗಾಗಿ ಅನೇಕ ರೀತಿಯಲ್ಲ ಬೇಕಾಗಿರತಕ್ಕದ್ದಾಗಿದೆ,

ನಮ್ಮಲ್ಲಿ ಈಗ ನಾನಾ ರೀತಿಯಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಅರಣ್ಯಸಂಪತ್ತು ಬೇಕು. ಆದ್ದರಿಂದ ಅರಣ್ಯವನ್ನು ಬಹಳ ಚೆನ್ನಾಗಿ ಕಾಪಾಡಬೇಕಾಗಿದೆ. ಕೆಲವು ಪ್ರದೇಶಗಳಲ್ಲಿ ಮಾನ್ಯ ಸದಸ್ಯರು ಹೇಳಿದಹಾಗೆ ಕೆಲವಾರು ತೊಂದರೆಗಳಿವೆ. ಒಂದೊಂದು ಸಂದರ್ಭದಲ್ಲಿ ವ್ಯವಸಾಯ ಮಾಡುತ್ತಿದ್ದ ಭೂಮಿ ಅರಣ್ಯಪ್ರದೇಶವಾಗಿ ಕಾರಣಾಂತರದಿಂದ ಕೆಲವು ಕಾಲದಮೇಲೆ ಆ ಭೂಮಿ ಗೆದ್ದಲು ಭೂಮಿಯಾಗಿಯೇ ಉಳಿದುಬಂದಿದೆ. ಇದರಿಂದ ಅನೇಕ ಜನರು ಆ ಪ್ರದೇಶಗಳ ಹತ್ತಿರ ವಾಸಮಾಡದೆ ಬೇರೆ ಕಡೆಗೆ ಹೋಗುತ್ತಿದ್ದಾರೆ. ಇದು ನಿನ್ನೆ ಮೊನ್ನೆಯ ಮಾತು ಅಲ್ಲ. ನೂರಾರು ವರ್ಷಗಳ ಹಿಂದೆ ಒಂದಾನೊಂದು ಕಾಲದಲ್ಲಿ ಈ ರೀತಿ ಆಗುತ್ತಿತ್ತು. ಆಮೇಲೆ ಜಮೀನು ಪಾಳು ಬಿದ್ದು ಬೇಚರಾಕ್ ಆದಮೇಲೆ ಅಂತಹ ಕಡೆಗಳಲ್ಲಿ ಅರಣ್ಯ ಬೆಳೆಯುವುದಕ್ಕೆ ಪ್ರಾರಂಭವಾಯಿತು. ಅಂತಹ ಅರಣ್ಯ ಪ್ರದೇಶಗಳು ಪಾಕೆಟ್ ಪಾಕೆಟ್ ಗಳಾಗಿ ಈಗಲೂ ರಿಸರ್ವ್ಡ್ ಇರಾಖೆಯಲ್ಲಿವೆ. ಅವನ್ನು ಕೆಲವು ಕಡೆಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಎಂಬುದಾಗಿ ನಮೂದು ಮಾಡಿಕೊಂಡು ಸರ್ಕಾರ ಹಾಗೆಯೇ ಕೆಲಕಾಲ ಇಟ್ಟುಕೊಂಡಿದ್ದರು. ಅದನ್ನೇನೂ ಸ್ಟೇಟ್ ಫಾರೆಸ್ಟ್ ಎಂಬುದಾಗಿ ಇಟ್ಟಿರಲಿಲ್ಲ. ನಂತರ ಡಿಸ್ಟ್ರಿಕ್ಟ್ ಫಾರೆಸ್ಟ್ ಬಗ್ಗೆ ಕೆಲವು ವರ್ಷಗಳ ಹಿಂದೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಯಾವ ಭಾಗದ ಪ್ರದೇಶ ಅರಣ್ಯಕ್ಕೆ ಸೇರಬೇಕು, ಯಾವ ಭಾಗದ ಪ್ರದೇಶವನ್ನು ವ್ಯವಸಾಯಕ್ಕೆ ಬಿಡಬೇಕು ಎಂದು ಒಂದು ಡೆಂಜೆಟಿವ್ ಅರೇಂಜ್‌ಮೆಂಟ್ ಮಾಡಿದ್ದರು. ಆಗಿನಿಂದಲೂ ಡಿಸ್ಟ್ರಿಕ್ಟ್ ಫಾರೆಸ್ಟ್ ಭಾಗದಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರುವುದನ್ನು ಕೆಲವುಕಡೆ ಕೊಡಬೇಕೆಂದು ಒತ್ತಾಯ ಇದೆ. ಇದನ್ನು ಇನ್ನೂ ಪೂರ್ಣವಾಗಿ ಪರಿಶೀಲನೆ ಮಾಡಬೇಕಾಗಿದೆ. ಈಗ ಶಿವಮೊಗ್ಗ ಮತ್ತು ನಾರ್ತ್ ಕೆನರಾ ವ್ಯವಸಾಯಕ್ಕೆ ಒಳ್ಳೆಯ ಹಾಗೂ ಯೋಗ್ಯ ಪ್ರದೇಶವಾಗಿ ಇರತಕ್ಕ ಭಾಗಗಳಾಗಿವೆ. ಆ ಪ್ರದೇಶಗಳನ್ನು ಸಂಬಂಧಪಟ್ಟ ಮಾನ್ಯ ಸದಸ್ಯರು ಸಂಬಂಧಪಟ್ಟ ಮಾನ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಬೇಕು. ಮಾನ್ಯ ಸದಸ್ಯರಲ್ಲಿ ಅನೇಕರಿಗೆ ಆ ಕಡೆಯೂ ನಮ್ಮಷ್ಟೇ ಅರಣ್ಯಗಳನ್ನು ಕಾಪಾಡಬೇಕೆಂಬ ಕುತೂಹಲ, ಆಸಕ್ತಿ ಇದೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ದಯವಿಟ್ಟು ನಾನು ಹೇಳುವುದನ್ನು ಸಾವಧಾನವಾಗಿ ಕೇಳಿ ಬೇಕು. ಇಲ್ಲಿಗೆ ಬರ್ಲಾ ಬರಲಿ, ತಾತಾ ಬರಲಿ, ಪರವಾ ಇಲ್ಲ. ಆದರೆ ಇಲ್ಲಿ ಅರಣ್ಯವಿದ್ದರೆ ಯಾರು ಬರುತ್ತಾರೆ ?

ಶ್ರೀ ವಿ. ಎನ್. ಪಾಟೀರ್.—ಅವರು ಮಾತ್ರ ಇಲ್ಲಿಗೆ ಬರುವುದು ಬೇಡ.

ಶ್ರೀ ಡಿ. ದೇವರಾಜ ಅರಸ್.—ಹಾಗಿಲ್ಲದೆ ನಮಗೆ ಅರಣ್ಯವೇ ಬೇಡಬೆಂದು ಹೇಳಿದರೆ ನಿಜವಾಗಿಯೂ ನಮ್ಮ ದೇಶದ ಅಭಿವೃದ್ಧಿಗೆ ತುಂಬಾ ತೊಂದರೆಯಾಗುತ್ತದೆ. ಕೆಲವು ಒತ್ತಡ ಇರುವ ಕಡೆ ಅದನ್ನು ಬಿಟ್ಟುಕೊಡುವುದಕ್ಕೆ ಸಾಧ್ಯವಿದೆಯೆಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನೋಡಿದರೆ ಅದು ಅವರ ಅಭಿಪ್ರಾಯವೆಂದು ನಾನು ಈಗ ಭಾವಿಸುತ್ತೇನೆ. ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಸ್ಥಳದಲ್ಲಿಯೇ ಪರೀಕ್ಷೆಮಾಡಿ ಯಾವ್ಯಾವುದನ್ನು ಬಿಡಬೇಕು, ಯಾವ್ಯಾವುದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಪಡೆದು ತೀರ್ಮಾನ ಮಾಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಭಾನಾಯಕರು ಇನ್ನುಮುಂದೆ ಸರ್ಕಾರದ ಜಮೀನನ್ನು ಹಂಚಬೇಕಾದರೆ ವ್ಯವಸಾಯಕ್ಕೆ ಯೋಗ್ಯವಾದುದನ್ನು ವ್ಯವಸಾಯಕ್ಕೇ ಬಿಟ್ಟು ಉಳಿದುದನ್ನು ಅರಣ್ಯಕ್ಕೊಸ್ಕರ ಕೊಡಬೇಕೆಂದು ಒಂದು ತೀರ್ಮಾನವಾಗಿದೆಯೆಂದು ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ನೋಡಿದರೆ, ನಮ್ಮ ತಾಲ್ಲೂಕಿನಲ್ಲಿ ವ್ಯವಸಾಯಕ್ಕೆ ಯೋಗ್ಯವಾದುದನ್ನು ಕಾಡಿನ ಬೆಳವಣಿಗೆಗಾಗಿ ತೆಗೆದುಕೊಂಡು, ಕಾಡು ಬೆಳೆಯುವ ಜಮೀನನ್ನು ವ್ಯವಸಾಯಕ್ಕಾಗಿ ಯಾರು ಜಮೀನಿಲ್ಲವೆಂದು ಹೇಳುತ್ತಾರೋ ಅಂತಹವರಿಗೆ ಹಂಚಿದ್ದಾರೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೂ ತಂದಿದ್ದೇನೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.— ಯಾವುದಾದರೂ ಲೋಕಲ್ ಇಷ್ಯೂ ಅಥವಾ ಸ್ಪೆಸಿಫಿಕ್ ಇಷ್ಯೂ ಆಗಿದ್ದರೆ, ಅದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಬರೆದು ಕಳುಹಿಸಿದರೆ ಅದನ್ನು ವಿಚಾರ ಮಾಡಲಾಗುತ್ತದೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.